ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮುಳಬಾಗಿಲು ಟೌನ್‌ನಲ್ಲಿ ಹೌಸಿಂಗ್ ಬೋರ್ಡ್‌ನ ವತಿಯಿಂದ ಕಟ್ಟಿರುವ ಮನೆಗಳು

3237 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ಟೌನಿನಲ್ಲಿ ಹೌಸಿಂಗ್ ಬೋರ್ಡ್‌ವತಿಯಿಂದ ಸುಮಾರು 1000 ಮನೆಗಳನ್ನು ಕಟ್ಟಲು ಜಮೀನು ಸ್ವಾಧೀನ ಪಡಿಸಿಕೊಳ್ಳಲು ಕಾರ್ಯಕ್ರಮ ಇತ್ತೆ?

ಆ) ಹಾಗಿದ್ದಲ್ಲಿ ಒಟ್ಟು ಎಷ್ಟು ಎಕರೆಗಳು ಜಮೀನು ಸ್ವಾಧೀನ ಕಾರ್ಯಕ್ರಮ ಯಾವ ಹಂತದಲ್ಲಿದೆ?

ಇ) ಮೇಲ್ಕಂಡ ಟೌನ್‌ನಲ್ಲಿ ಸರ್ಕಾರದವರು ಕಟ್ಟಬೇಕೆಂದಿರುವ ಒಟ್ಟು ಮನೆಗಳೆಷ್ಟು? ಒಂದೊಂದು ಮನೆಗೂ ತಗಲುವ ಅಂದಾಜು ವೆಚ್ಚವೆಷ್ಟು?

ಈ) ಜಮೀನು ಸ್ವಾಧೀನ ಪಡಿಸಿಕೊಂಡು ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಲು ಕೂಡಲೇ ಕಾರ್ಯಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇದೆ.

ಆ) 1) 100 ಎಕರೆ ಸರ್ಕಾರಿ ಜಮೀನು ಲಭ್ಯವಿದ್ದು, ಇದನ್ನು ಮಂಜೂರು ಮಾಡಲು ಸರ್ಕಾರದೊಡನೆ ಪತ್ರ ನಡವಳಿಕೆ ನಡೆದಿದೆ.

2) 92.28 ಎಕರೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳಲು ಗುರುತಿಸಿದ್ದು ಜಮೀನಿನ ವಿವರಣೆ ಹಾಗೂ ದಾಖಲೆಗಳನ್ನು ಪಡೆಯಲಾಗುತ್ತಿದೆ.

ಇ) ಭೂಮಿಯನ್ನು ವಶಪಡಿಸಿ ಕೊಂಡನಂತರ ರೂಪ-ರೇಖೆಯನ್ನು ತಯಾರಿಸಿ ವಿಸ್ತೀರ್ಣಕ್ಕೆ ತಕ್ಕಂತೆ ವಿವಿಧ ಶ್ರೇಣಿಗಳ ಮನೆಯನ್ನು ಮುಂದೆ ನಿರ್ಧರಿಲಾಗುವುದು.

ಈ) ಜಮೀನು ಸ್ವಾಧೀನ ಪಡಿಸಿಕೊಂಡ ನಂತರ ಶೀಘ್ರವಾಗಿ ಕಾರ್ಯಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಡಿಸ್ಟಿಲರಿಗಳಿಗೆ ಪರವಾನಗಿ

3100 - ಶ್ರೀ ವೆಂಕಟಪ್ಪ (ಮುಳಬಾಗಿಲು): ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1-1-1990ರಿಂದ ಒಟ್ಟು ಎಷ್ಟು ಡಿಸ್ಟಿಲರಿಗಳಿಗೆ ಪರವಾನಗಿಗಳನ್ನು ನೀಡಲಾಗಿದೆ? ಅವರುಗಳ ಹೆಸರು ಮತ್ತು ವಿಳಾಸಗಳೇನು?

ಆ) ಅಂತಹ ಪರವಾನಗಿಗಳನ್ನು ನೀಡಿದ ಪ್ರಯುಕ್ತ ಈ ವರ್ಷದಲ್ಲಿ ಸರ್ಕಾರಕ್ಕೆ ಬರುವ ಆದಾಯವೆಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) 20 (ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ)

ಆ) ರೂ. 33,00,000.00